

# ಸಾಧುವಾದ ಕುದುರೆ

ದೀಪಶ್ರೀ ಎಸ್‌. ಕೂಡ್ಲಿಗಿ
ಕಲೆ: ಸಂತೋಷ್ ಸಸಿಹಿತ್ಲು

ಸೋಮಪುರ ಎಂಬ ಊರಿನಲ್ಲಿ ರಾಮಣ್ಣ ಎಂಬ ಬಡಪಾಯಿ ವಾಸವಾಗಿದ್ದ. ಆತನ ಹತ್ತಿರ ಒಂದು ಸುಂದರವಾದ ಕುದುರೆ ಇತ್ತು. ಕೆಲ ದಿನಗಳ ನಂತರ ಅನಾರೋಗ್ಯ ಉಂಟಾಗಿ ಕುದುರೆ ಸತ್ತು ಹೋಯಿತು. ಪ್ರೀತಿಯ ಕುದುರೆ ಸತ್ತು ಹೋಗಿದ್ದರಿಂದ ರಾಮಣ್ಣನಿಗೆ ತುಂಬಾ ಬೇಸರ ಉಂಟಾಯಿತು. ಕುದುರೆ ಸತ್ತು ಹೋದ ದುಃಖದಲ್ಲಿ ಊರೂರು ಸುತ್ತುತ್ತಾ ಅಲೆದಾಡುತ್ತಿದ್ದ. ಹೀಗೆ ಹೋಗುತ್ತಿರುವಾಗ ಒಂದು ಹಳ್ಳಿಗೆ ಬಂದು ಸುಸ್ತಾಗಿ ದೇವಸ್ಥಾನದ ಎದುರು ವಿಶ್ರಾಂತಿ ಪಡೆಯುತ್ತಿದ್ದ.

ಬೇಸರದಿಂದ ಕುಳಿತಿದ್ದ ರಾಮಣ್ಣನ ಪೂರ್ವಾಪರ ಕಥೆ ಕೇಳಿ ಮರುಕಗೊಂಡ ಊರಿನ ಶೇಖ್, ಅವನಿಗೊಂದು ಕುದುರೆ ಮರಿಯನ್ನು ಉಡುಗೊರೆಯಾಗಿ ನೀಡಿದ. ರಾಮಣ್ಣನಿಗೆ ಕೊಂಚ ಸಮಾಧಾನವಾಯಿತು. ಮೊದಲಿನ ಕುದುರೆಯಂತೆ ಎರಡನೇ ಕುದುರೆ ಮರಿಯನ್ನು ಹೆಚ್ಚು ಪ್ರೀತಿಸತೊಡಗಿದ. ಕುದುರೆ ಮರಿ ಪ್ರೀತಿಯಲ್ಲಿ ಮೊದಲ ಕುದುರೆ ಸಾವನ್ನು ಮರೆತುಹೋಗಿದ್ದ. ದುರದೃಷ್ಟವೆಂಬಂತೆ ಎರಡನೇ ಕುದುರೆ ಕೂಡ ಸತ್ತು ಹೋಯಿತು.

ಎರಡನೇ ಕುದುರೆ ಸತ್ತ ಭಾರ ತಾಳಲಾರದೇ ರಾಮಣ್ಣ ಕುಸಿದು ಹೋದ. ಆ ಕುದುರೆಯನ್ನು ಒಂದು ಬೆಟ್ಟದ ತುದಿಗೆ ತೆಗೆದುಕೊಂಡು ಹೋಗಿ ಗುಂಡಿ ಅಗೆದು ಅದನ್ನು ಹೂತು ಹಾಕಿದ. ಕುದುರೆಗಾಗಿ ಒಂದು ಸಮಾಧಿಯನ್ನು ನಿರ್ಮಾಣ ಮಾಡಿ, ಆ ಸಮಾಧಿಯ ಮೇಲೆ ಒಂದು ಕಂಬವನ್ನು ಸ್ಥಾಪನೆ ಮಾಡಿದ. ಕುದುರೆಯ ನೆನಪಿಗಾಗಿ ಒಂದು ಬಾವುಟವನ್ನು ಕಂಬಕ್ಕೆ ಕಟ್ಟಿದ. ಆ ಸಮಾಧಿಯ ಬಳಿ ದಿನನಿತ್ಯ ಕಾಲ ಕಳೆಯುತ್ತಾ ಕುಳಿತ. ದಾರಿಹೋಕನೊಬ್ಬ ರಾಮಣ್ಣ ಸಮಾಧಿ ಬಳಿ ಕುಳಿತಿರುವುದನ್ನು ಕಂಡು, ಈ ಸಮಾಧಿ ಸಾಧು–ಸಂತರದ್ದು ಇರಬಹುದೆಂದು ಭಾವಿಸಿದ. ತನ್ನ ಜೇಬಿನಿಂದ ಹಣ ತೆಗೆದು ರಾಮಣ್ಣನಿಗೆ ಕೊಟ್ಟ.

ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ದಾರಿಹೋಕ ಹಾಕಿದ ಹಣಕ್ಕೆ ಸರದಿಯಾಗಿ, ಊರಿನ ಜನರೆಲ್ಲ ರಾಮಣ್ಣನಿಗೆ ದುಡ್ಡು ಹಾಕತೊಡಗಿದರು. ಸಮಾಧಿಗೆ ಒಂದು ದೊಡ್ಡ ಗುಡಿ ನಿರ್ಮಾಣ ಮಾಡಿದರು. ವರ್ಷಗಳುರುಳಿದವು. ಬೆಟ್ಟದಲ್ಲಿ ಮಹಾನ್ ಸಾಧುವನ್ನು ಸಮಾಧಿ ಮಾಡಲಾಗಿದೆ ಎಂಬ ಸುದ್ದಿ ಊರತುಂಬ ಹಬ್ಬಿ, ದೂರದ ಊರುಗಳಿಗೆ ತಲುಪಿತು. ರೋಗದಿಂದ ನರಳುತ್ತಿರುವವರು ತಮ್ಮ ಕಾಯಿಲೆ ವಾಸಿ ಮಾಡಿಕೊಳ್ಳಲೆಂದು ಬರುತ್ತಿದ್ದರು. ಅವರ ಕಾಯಿಲೆ ವಾಸಿಯಾಗುತ್ತದೆ ಎಂಬಂತೆ ರಾಮಣ್ಣ ಮಾತನಾಡುತ್ತಿದ್ದ.

ರಾಮನಿಗೆ ಕುದುರೆಯನ್ನು ಕೊಟ್ಟಿದ್ದ ಪಕ್ಕದ ಹಳ್ಳಿಯ ಶೇಖ್‌ಗೂ ಸಾಧುವಿನ ವಿಚಾರ ತಿಳಿದು, ಸಮಾಧಿ ಹತ್ತಿರ ಪ್ರಾರ್ಥಿಸಲು ಬಂದ. ಬೆಟ್ಟ ಏರಿ ಸಮಾಧಿಯ ಬಳಿಗೆ ಬಂದಾಗ ರಾಮಣ್ಣನನ್ನು ಕಂಡು ಅಚ್ಚರಿಯಾಯಿತು. ರಾಮಣ್ಣ ಇಲ್ಲಿ ಸಮಾಧಿಯಾಗಿರುವ ಸಾಧುವಿನ ಹೆಸರೇನು? ಎಂದು ಕೇಳಿದ. ರಾಮಣ್ಣನಿಗೆ ಹೆದರಿಕೆ ಶುರುವಾಯಿತು. ಅವನನ್ನು ಕಂಡು ದಿಗ್ಭ್ರಮೆ ಉಂಟಾಯಿತು. ಹೆದರುತ್ತಾ ಮಾತು ಶುರು ಮಾಡಿದ.

ಶೇಖ್ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಇಲ್ಲಿ ಯಾವ ಸಾಧು ಸಂತರ ಸಮಾಧಿಯೂ ಇಲ್ಲ. ನೀವು ನನಗೆ ಕೊಟ್ಟ ಕುದುರೆ ಮರಿ ಸತ್ತು ಹೋಯಿತು. ಅದನ್ನು ಇಲ್ಲಿಯೇ ಹೂತು ಹಾಕಿದ್ದೇನೆ. ಜನರು ಅದನ್ನು ಸಾಧು–ಸಂತರ ಸಮಾಧಿ ಎಂದು ತಿಳಿದು, ನಿತ್ಯ ಪ್ರಾರ್ಥಿಸಲು ಬರುತ್ತಾರೆ. ಇದರಲ್ಲಿ ನನ್ನ ತಪ್ಪೇನಿಲ್ಲ ಎಂದ. ರಾಮಣ್ಣನ ಮಾತು ಕೇಳಿ ಶೇಖ್ ಜೋರಾಗಿ ನಕ್ಕ. ನನ್ನ ಹಳ್ಳಿಯಲ್ಲೂ ಇಂಥದ್ದೇ ಒಂದು ಸಮಾಧಿ ಇದೆ. ನೀನು ಅದನ್ನು ನೋಡಿದ್ದೀಯ ತಾನೇ ಅದು ನಿನಗೆ ನೆನಪಿದೆಯಲ್ಲಾವ ಎಂದಾಗ, ಹೂಂ ಎಂದ ರಾಮಣ್ಣ.

ಹಾಗಾದರೆ ರಾಮಣ್ಣ ನೀನು ಏನು ಹೆದರಬೇಕಾಗಿಲ್ಲ ಅಲ್ಲಿ ಕೂಡ ಯಾವ ಸಾಧುವನ್ನು ಸಮಾಧಿ ಮಾಡಿಲ್ಲ. ಅಲ್ಲಿ ಹೂತು ಹಾಕಿರುವುದು ಸಹ ಒಂದು ಕುದುರೆಯೇ. ಅದು ಈ ಕುದುರೆಮರಿಯ ತಾಯಿಯ ಸಮಾಧಿ ಎಂದು ಹೇಳುತ್ತಾ ಶೇಖ್ ರಾಮಣ್ಣನನ್ನು ಸಮಾಧಾನಪಡಿಸಿದ.